ಟ್ರಾಲ್ ಬಲೆಗಳನ್ನು ಮಾತ್ರ ಉಪಯೋಗಿಸಬೇಕು.

- ಸ್ಟೇಕ್ ನೆಟ್‌ಗಳನ್ನು ಉಪಯೋಗಿಸಬಾರದು. ಸಿಗಡಿ ಮರಿಗಳನ್ನು ಹಿಡಿಯಲು ಹಿನ್ನೀರಿನಲ್ಲಿ ಸಿಗಡಿ ಸ್ಟೇಕ್ ಬಲೆಗಳನ್ನು ಉಪಯೋಗಿಸುವುದರಿಂದ ಸಿಗಡಿಗಳ ಸಂತಾನವನ್ನು ಕಡಿಮೆಗೊಳಿಸುತ್ತದೆ.
- ನಿರ್ಧಿಷ್ಟ ಗಾತ್ರದ ಮೀನುಗಳನ್ನು ಮಾತ್ರ ಹಿಡಿಯಬಲ್ಲ ಟ್ರಾಲ್ ಮತ್ತು ಗಿಲ್ ನೆಟ್ ಬಲೆಗಳನ್ನೇ ಉಪಯೋಗಿಸಬೇಕು. (selective fishing gears)
- ಅಪಾಯದ ಅಂಚಿನಲ್ಲಿರುವ ಮೀನುಗಳನ್ನು ಮತ್ತು ಇತರೆ ಪ್ರಾಣಿಗಳನ್ನು ಎಂದಿಗೂ ಹಿಡಿಯಬಾರದು

ಜವಾಬ್ದಾರಿಯುತ ಮೀನುಗಾರಿಕೆ:

ಜಾಗತಿಕ ನೀತಿ ಸಂಹಿತೆಯ ಮೂಲ ಉದ್ದೇಶಗಳು

ಅಂತಾರಾಷ್ಟ್ರೀಯ ಕಾನೂನಿನಡಿ ಮೀನುಗಾರಿಕೆಯ ವಿವಿಧ ಚಟುವಟಿಕೆಗಳಿಗೆ ಜವಾಬ್ದಾರಿಯುತ ಮೀನುಗಾರಿಕೆಯ ಚೌಕಟ್ಟನ್ನೂ ರೂಪಿಸಿ ಜಾರಿಗೊಳಿಸುವುದು.

- ಮೀನುಗಾರಿಕೆಯ ಜೀವಶಾಸ್ತ್ರ, ತಾಂತ್ರಿಕತೆ, ಆರ್ಥಿಕತೆ, ಸಾಮಾಜಿಕ ನ್ಯಾಯ ಪರಿಸರ ಹಾಗೂ ವಾತಾವರಣದ ಅಂಶಗಳು ಹಾಗೂ ಮೀನು ಮಾರುಕಟ್ಟೆಯ ವ್ಯವಸ್ಥೆಯ ಸುಧಾರಣೆಯನ್ನುಗಣನೆಗೆ ತೆಗೆದುಕೊಳ್ಳುವುದು.
- ರಾಷ್ಟ್ರೀಯ ನೀತಿಗನುಗುಣವಾಗಿ ಜವಾಬ್ದಾರಿಯುತ ಮತ್ಸ್ಯಸಂಪನ್ಮೂಲ ಸಂರಕ್ಷಣೆ, ಮೀನುಗಾರಿಕೆ ನಿರ್ವಹಣೆ ಹಾಗೂ ಅಭಿವೃದ್ಧಿಗೆ ಮೀನುಗಾರಿಕೆಯ ಕಟ್ಟಳೆಗಳನ್ನು ಯಥಾವತ್ತಾಗಿ ಜಾರಿಗೊಳಿಸಲು ಅನುಕೂಲವಾಗುವಂತೆ ಕಾನೂನಿನ ಹಾಗೂ ಇತರೇ ಸಾಂಸ್ಥಿಕ ಚೌಕಟ್ಟನ್ನು ಸಿದ್ಧಪಡಿಸಿಕೊಡುವುದು.
- ಮತ್ಸ್ಯಸಂಪನ್ಮೂಲ ಸಂರಕ್ಷಣೆ, ನಿರ್ವಹಣೆಗೆ ಹಾಗೂ ಅಭಿವೃದ್ಧಿಗೆ ಪೂರಕವಾದ ತಾಂತ್ರಿಕ, ಆರ್ಥಿಕ ಹಾಗೂ ಇತರೆ ಸಹಕಾರವನ್ನು ಒದಗಿಸುವುದು.
- ಮೀನುಗಾರಿಕೆ ಮುಖಾಂತರ ಸ್ಥಳೀಯ ಜನರಿಗೆ ಪೌಷ್ಟಿಕ ಆಹಾರದ ಪೂರೈಕೆ, ಆಹಾರದ ಗುಣಮಟ್ಟ ಹಾಗೂ ಆಹಾರ ಭದ್ರತೆ ಕುರಿತಂತೆ ಅಗತ್ಯ ನೆರವು ನೀಡುವಿಕೆ.
- ಮತ್ಸ್ಯ ಸಂಪನ್ಮೂಲಗಳ ಸಂರಕ್ಷಣೆ ಹಾಗೂ ಕರಾವಳಿ ಪರಿಸರದ ರಕ್ಷಣೆಗೆ ಸೂಕ್ತ ಸಹಕಾರ ನೀಡುವಿಕೆ. ಮೀನುಗಾರಿಕೆ ಹಾಗೂ ವಾತಾವರಣಕ್ಕೆ ಸಂಬಂಧಪಟ್ಟ ಅಂಶಗಳ ಬಗ್ಗೆ ಕೂಲಂಕುಶ ಸಂಶೋಧನೆ ನಡೆಸಲು ಅನುವುಮಾಡಿಕೊಡುವುದು
- ಮೀನುಗಾರಿಕೆ ಕ್ಷೇತ್ರದಲ್ಲಿ ದುಡಿಯುತ್ತಿರುವ ಪ್ರತಿಯೊಬ್ಬರೂ ಪಾಲಿಸಬೇಕಾದ ನೀತಿ ಸಂಹಿತೆಯನ್ನು ತಿಳಿಯಪಡಿಸುವುದು.
- ಸಂಪನ್ಮೂಲದ ಮೇಲೆ ಮೀನುಗಾರಿಕೆಯ ಒತ್ತಡ ಜಾಸ್ತಿಯಾಗಿದ್ದ ಪಕ್ಷದಲ್ಲಿ ಹೆಚ್ಚಿನ ದೋಣಿಗಳನ್ನು ಕಡಿತಗೊಳಿಸುವ ಅಥವಾ ಒತ್ತಡ ಕಡಿಮೆಮಾಡುವ ಪರ್ಯಾಯ ವ್ಯವಸ್ಥೆಯನ್ನು ರೂಪಿಸಿ ಕ್ರಮಕೈಗೊಳ್ಳುವುದು.
- ಆಯಾ ದೇಶಗಳ ಮತ್ಸ್ಯಸಂಪನ್ಮೂಲ ಹಾಗೂ ಅವುಗಳ ವಾತಾವರಣದ ಅಂಶಗಳ ಕುರಿತ ವೈಜ್ಞಾನಿಕ ಪುರಾವೆಗಳನ್ನು ಮೀನುಗಾರರ ಪಾರಂಪರಿಕ ಜ್ಞಾನವು ಸೇರಿದಂತೆ ಸೂಕ್ತ ಮೀನುಗಾರಿಕೆ ನಿರ್ವಹಣೆ ಮತ್ತು ಸಂರಕ್ಷಣೆ ಕ್ರಮಗಳನ್ನು ಜಾರಿಗೊಳಿಸುವುದು.
- ಅಲ್ಲದೆ ಪರಿಸರದ ಆರ್ಥಿಕ ಹಾಗೂ ಸಾಮಾಜಿಕ ಅಂಶಗಳನ್ನೂ ಗಣನೆಗೆ ತೆಗೆದುಕೊಳ್ಳತಕ್ಕದ್ದು.

**ಹಿಡಿದೆವಾದರೆ ಮೀನು..... ಮರಿಮಾಡೋ ವೇಳೆಗೆ**

ಸಮುದ್ರದಲಿ ಮೀನುಗಳು ಹಲವಾರು ಬಗೆ
ಪ್ರಮುಖವಾದವು ಮಾತ್ರ ಐವತ್ತು ಬಗೆ
ಇವುಗಳಿಂದಲೇ ಭದ್ರತೆ ಮೀನುಗಾರರ ಬಾಳಿಗೆ
ರಕ್ಷಿಸಲು ಬೇಡವೇ ಇವುಗಳನು ನಾಳೆಗೆ?
ಏರುತಿದೆ ಬೇಡಿಕೆ ಬಂಗುಡೆ ಬೂತಾಯಿಗೆ
ಮುಗಿ ಬೀಳುವವರೇ ಎಲ್ಲರೂ ಅಂಜಾಲು ಮಾಂಜಿಗೆ
ಹಿಡಿದೆವಾದರೆ ಮೀನು ಮರಿಮಾಡೋ ವೇಳೆಗೆ
ಮರೆಯ ಬೇಕಾದೀತು ಈ ಮೀನುಗಳ ನಾಳೆಗೆ!

# ಮೀನುಗಾರಿಕಾ ಮಹಾವಿದ್ಯಾಲಯ, ಮಂಗಳೂರು

## ಮತ್ಸ್ಯ ಸಂಪನ್ಮೂಲ ನಿರ್ವಹಣೆ ವಿಭಾಗ

**ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ**

**"ಜವಾಬ್ದಾರಿಯುತ ಮೀನುಗಾರಿಕೆ"**




ಡಾ. ರಾಜೇಶ್, ಡಿ. ಪಿ.
ಸಹಾಯಕ ಪ್ರಾಧ್ಯಾಪಕರು

ಡಾ. ಎಚ್. ಎನ್. ಆಂಜನೇಯಪ್ಪ
ಪ್ರಾಧ್ಯಾಪಕರು

ಡಾ. ಮೃದುಲಾ ರಾಜೇಶ್
ಸಹಾಯಕ ಪ್ರಾಧ್ಯಾಪಕರು

ಕು। ನಯನ ಪಿ.

ಡಾ॥ ಎಸ್. ಎಂ. ಶಿವಪ್ರಕಾಶ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಮತ್ಸ್ಯ ಸಂಪನ್ಮೂಲ ನಿರ್ವಹಣೆ ವಿಭಾಗ
ಮೀನುಗಾರಿಕಾ ಮಹಾವಿದ್ಯಾಲಯ, ಮಂಗಳೂರು




2019

### "ಜವಾಬ್ದಾರಿಯುತ ಮೀನುಗಾರಿಕೆ" ಎಂದರೇನು?

ಸೂಕ್ತ ಕಾಯ್ದೆ ಕಟ್ಟಳೆಗಳ ಚೌಕಟ್ಟಿನಲ್ಲಿ **ಉತ್ತರಾದಾರಿತ್ವದೊಂದಿಗೆ, ಪಾರದರ್ಶಕತ್ವ** ಹಾಗೂ **ವಿವೇಕಚಿತ್ತದಿಂದ** ಕೂಡಿದ, **ವೈಜ್ಞಾನಿಕ** ತಳಹದಿಯ ಮೇಲೆ ನಡೆಸುವ ಸುಸ್ಥಿರ ಮೀನುಗಾರಿಕಾ ಚಟುವಟಿಕೆಯನ್ನು **'ಜವಾಬ್ದಾರಿಯುತ ಮೀನುಗಾರಿಕೆ'** ಎಂದು ಕರೆಯುತ್ತಾರೆ.

### ಜವಾಬ್ದಾರಿಯುತ ಮೀನುಗಾರಿಕೆ

- ಇಂದಿನ ಹಾಗೂ ಭವಿಷ್ಯದ ಜನಾಂಗಕ್ಕೆ ಮೀನುಗಾರಿಕೆಯು ಸುಸ್ಥಿತಿಯಲ್ಲಿ ಮುಂದುವರೆಯಬೇಕಾದರೆ, ಅದನ್ನು ಜವಾಬ್ದಾರಿಯುತವಾಗಿ ನಡೆಸಿಕೊಂಡು ಹೋಗಬೇಕಿದೆ.
- ವಿಶ್ವದೆಲ್ಲೆಡೆ ಮತ್ಸ್ಯಸಂಪನ್ಮೂಲಗಳು ಕ್ಷೀಣಿಸುತ್ತಿರುವ ಇಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಅವುಗಳನ್ನು ಸಂರಕ್ಷಿಸಿ, ಜವಾಬ್ದಾರಿಯುತವಾಗಿ ನಡೆಸಿಕೊಂಡು ಹೋಗಲು ವಿಶ್ವಸಂಸ್ಥೆಯಅಂಗವಾದ ವಿಶ್ವಆಹಾರ ಸಂಸ್ಥೆಯು 1995ರ ಅಕ್ಟೋಬರ್ 31 ರಂದು ಜವಾಬ್ದಾರಿಯುತ ಮೀನುಗಾರಿಕೆಯ ನೀತಿ ಸಂಹಿತೆಯನ್ನು ಜಾರಿಗೊಳಿಸಿದೆ.

### ನೀತಿ ಸಂಹಿತೆಯ ಪ್ರಮುಖ ಅಂಶಗಳು:

- ಮತ್ಸ್ಯ ಸಂಪನ್ಮೂಲಗಳನ್ನು ಯಾರು ಬಳಸುವರೋ ಅವರೇ ಅವುಗಳನ್ನು ಕಾಪಾಡಬೇಕು.
- ಮೀನುಗಾರಿಕಾ ನಿರ್ವಹಣೆಯು ಈಗಿನ ಮತ್ತು ಮುಂದಿನ ಪೀಳಿಗೆಯವರಿಗೂ ಅನ್ವಯಿಸುತ್ತದೆ.
- ಮತ್ಸ್ಯೋದ್ಯಮದಲ್ಲಿ ತೊಡಗಿರುವ ಕೆಲಸಗಾರರ ನ್ಯಾಯಯುತ ಜೀವನ ಮತ್ತು ಅವರ ಹಕ್ಕುಗಳ ರಕ್ಷಣೆ ಹಾಗೂ ಉದ್ಯಮದ ಮೇಲೆ ನೀತಿ ರೂಪಿಸುವಲ್ಲಿ ಅವರನ್ನೂ ಬಳಸಿಕೊಳ್ಳುವುದು.
- ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಇರುವಂತೆ ನೋಡಿಕೊಳ್ಳುವುದು.

### ನೀತಿ ಸಂಹಿತೆಯ ಸಾಮಾನ್ಯ ತತ್ವಗಳು

- ಯಾರು ಮೀನನ್ನು ಹಿಡಿಯುತ್ತಾರೋ ಅವರೇ ಆ ಸಂಪನ್ಮೂಲಗಳನ್ನು ರಕ್ಷಿಸಬೇಕು.
- ಪರಿಸರವನ್ನು ರಕ್ಷಿಸುವ ಜವಾಬ್ದಾರಿ ಅವರೇ ಹೊರಬೇಕು.
- ಮೀನು ಹಿಡಿಯಲು ಪಡೆದಿರುವ ಹಕ್ಕಿನಂತೆ, ಮೀನನ್ನು ಸಂರಕ್ಷಿಸುವ ಬಾಧ್ಯತೆಯೂ ಅವರ ಮೇಲಿದೆ ಎಂಬ ಅಂಶ ಎಲ್ಲರಗಮನದಲ್ಲಿರತಕ್ಕದ್ದು.
- ಮೀನುಗಾರಿಕಾ ನಿರ್ವಹಣೆಯು ಮೀನು ಸಂಪನ್ಮೂಲಗಳ ಲಭ್ಯತೆ, ಗುಣಮಟ್ಟ, ಹಾಗೂ ವೈವಿಧ್ಯತೆಕಾಯ್ದುಕೊಂಡು ಬರುವಲ್ಲಿ ಪೂರಕ ಕ್ರಮಕೈಗೊಳ್ಳುವುದು ಹಾಗೂ ತನ್ಮೂಲಕ ಸುಸ್ಥಿರ ಮೀನು ಉತ್ಪಾದನೆ ಜಾರಿಯಲ್ಲಿರುವಂತೆ ನೋಡಿಕೊಳ್ಳುವುದು
- ಆಹಾರ ಭದ್ರತೆ ಹಾಗೂ ಬಡತನ ನಿರ್ಮೂಲನೆಗೆ ಗಮನ ಹರಿಸುವುದು
- ಮತ್ಸ್ಯ ಸಂಪನ್ಮೂಲಗಳ ರಕ್ಷಣೆ ಅಲ್ಲದೇ, ಜಲರಾಶಿಯ ವಾತಾವರಣದಲ್ಲಿ ಕಂಡು ಬರುವ ಇತರೆ ಜೀವಿ ವೈವಿಧ್ಯತೆಯನ್ನು ಯಥಾವತ್ತಾಗಿ ಇರುವಂತೆ ನೋಡಿ ಕೊಳ್ಳುವುದು.

### ವಿನಾಶಕಾರಿ ಮೀನುಗಾರಿಕಾ ಪದ್ಧತಿಗಳು

**ಮತಿಹೀನ ಮೀನು ಮೀನುಗಾರಿಕೆ (Ghost fishing)**

ಮೀನುಗಾರಿಕೆಯಲ್ಲಿ ಕಳೆದುಹೋದ / ಬಿಸಾಡಿದ ಬಲೆಗಳು ಬೋನಿನಂತೆ ವರ್ತಿಸಿ ಅಸಂಖ್ಯಾತ ಸಮುದ್ರದ ಜೀವಿಗಳು ನಿರಂತರ ಸಾವಿಗೀಡಾಗಲು ಕಾರಣವೆಂದು ಪರಿಗಣಿಸಲಾಗಿದೆ.

**ಮೀನುಗಾರಿಕೆಯ ವೇಳೆ ಹಿಡಿಯುವ ಅನುಪಯುಕ್ತ ಮೀನುಗಳ ಪ್ರಮಾಣ / ಬಿಸಾಡಿದ ಮೀನಿನ ಪ್ರಮಾಣ (Bycatch and discards)**–ಟ್ರಾಲ್ ಬೋಟುಗಳು / ದೋಣಿಗಳು – ಪ್ರತೀ ಒಂದು ಕೆ.ಜಿ. ಸಿಗಡಿ ಹಿಡಿಯಲು 10 ಕೆ.ಜಿ. ಕಸಕಡ್ಡಿಯನ್ನು (Trash) ತ್ಯಜಿಸುತ್ತವೆ.

**ವಿಷ ವಸ್ತುಗಳ ಬಳಕೆ :** ಹವಳ ಪ್ರದೇಶಗಳಲ್ಲಿ ಮೀನುಗಳನ್ನು ಹಿಡಿಯಲು ಉಪಯೋಗಿಸುವ ವಿಷ ಪದಾರ್ಥಗಳು ಇತರೆ ಕಡಲ ಜೀವಿಗಳನ್ನು ಸಹ ಕೊಲ್ಲುತ್ತವೆ.

**ಸ್ಪೋಟಕಗಳು:** ಡೈನಾಮೈಟ್ ಸಿಡಿಸುವ ಮೂಲಕ ದೊಡ್ಡ ಪ್ರಮಾಣದಲ್ಲಿ ಮೀನುಗಳನ್ನು ಹಾಗೂ ಇತರೆ ಕಡಲ ಪ್ರಾಣಿಗಳನ್ನು ಹಿಡಿಯುವ/ ಕೊಲ್ಲುವ ವಿಧ್ವಂಶಕಾರಿ ಮೀನುಗಾರಿಕೆ.

### ನೀತಿ ಸಂಹಿತೆ – ವೈಶಾಲ್ಯತೆ

- ಜವಾಬ್ದಾರಿಯುತ ಮೀನುಗಾರಿಕೆ ನೀತಿ ಸಂಹಿತೆಯು ಜಾಗತಿಕ ಮಟ್ಟದಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವ ಎಲ್ಲಾ ದೇಶಗಳು ಅನುಸರಿಸಬೇಕೆಂಬ ಉದ್ದೇಶದಿಂದ ಜಾರಿಗೊಳಿಸಲಾಗಿದೆ. ಆದರೆ ಅದನ್ನು ಪಾಲಿಸಲೇಬೇಕೆಂಬ ಕಾನೂನಿನ ಕಟ್ಟುಪಾಡು ಅದರಲ್ಲಿಲ್ಲ! ಏನಿದ್ದರೂ ಸ್ವಯಂಪ್ರೇರಣೆಯಿಂದ ಆಯಾ ದೇಶಗಳ ಸರ್ಕಾರಗಳು ಆ ನೀತಿಯನ್ನು ಅಳವಡಿಸಿಕೊಳ್ಳಬಹುದೆಂದು ಅದು ಸೂಚಿಸಿದೆ.
- ನಮ್ಮ ಭಾರತ ಘನಸರಕಾರವು ವಿಶ್ವಸಂಸ್ಥೆಯ ಈ ಸಲಹೆಯನ್ನು ಸಕಾರಾತ್ಮಕವಾಗಿ ಸ್ವೀಕರಿಸಿದ್ದು, ವಿಶ್ವ ಆಹಾರ ಸಂಸ್ಥೆಯ ಅಧಿಸೂಚನೆಗೆ ಒಪ್ಪಿಗೆ ಸೂಚಿಸಿ ಸಹಿ ಹಾಕಿದೆ.

### ನಾವು ಏನು ಮಾಡಬಹುದು?

- ಮೀನುಗಾರಿಕಾ ಬಲೆಗಳನ್ನು, ಉಪಯೋಗಿಸಿದ ನೈಲಾನ್ ಹಗ್ಗಗಳನ್ನು, ಲಂಗರುಗಳನ್ನು, ತ್ಯಾಜ್ಯತೈಲವನ್ನು ಮತ್ತು ಬಲ್ಬುಗಳನ್ನು ಎಂದಿಗೂ ಕಡಲಿಗೆ ಎಸೆಯಬಾರದು.
- ಮೀನುಗಳನ್ನು ಹಿಡಿಯಲು ವಿಷ ವಸ್ತುಗಳನ್ನು ಮತ್ತು ಸ್ಫೋಟಕಗಳನ್ನು ಸಂಪೂರ್ಣವಾಗಿ ತೊರೆಯಬೇಕು.
- ಸಣ್ಣ ಮೀನು ಮರಿಗಳು ತಪ್ಪಿಸಿಕೊಳ್ಳುವಂತೆ ಚೌಕಾಕಾರದ ಬಲೆ ಕಣ್ಣುಗಳಿರುವ ತುದಿಯನ್ನು (Cod ends) ಹೊಂದಿದ